


1988ರ ಸೋಲ್ ಒಲಿಂಪಿಕ್ಸ್‌ನಲ್ಲಿ ಪುರುಷರ 100 ಮೀಟರ್ ಓಟದ ಸ್ಪರ್ಧೆಯ ಪರಿ...

ಚಿನ್ನದ ಪದಕಗಳು, ಕಳೆದ ವರ್ಷ ಸ್ಪೇನ್ ಮಾಸ್ಟರ್ಸ್ ಟೂರ್ನಿಯಲ್ಲಿ ಬೆಳ್ಳಿ, ಇದೇ ವರ್ಷದ ಮಲೇಷ್ಯಾ ಮಾಸ್ಟರ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಹಿಂದಿನ ಒಲಿಂಪಿಕ್ಸ್‌ಗೆ ಹೋಲಿಸಿದರೆ ಈಗ ಬ್ಯಾಡ್ಮಿಂಟನ್‌ನ ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗದಲ್ಲಿ ಭಾರತದ ಸ್ಪರ್ಧಿಗಳ ನಡುವೆಯೇ ಉತ್ತಮ ಸ್ಪರ್ಧೆಯಿದೆ. ಅನೇಕ ಯುವ ಆಟಗಾರರು ವಿಶ್ವ ಮಟ್ಟದ ಕ್ರೀಡಾಕೂಟಗಳಲ್ಲಿ ಪ್ರಶಸ್ತಿಗಳನ್ನು ಗೆಲ್ಲುತ್ತಿದ್ದಾರೆ. ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಂಡೊನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿ ಸೂಪರ್ 1000 ಟೂರ್ನಿಯಲ್ಲಿ ಪುರುಷರ ವಿಭಾಗದ ಡಬಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಮೊದಲ ಜೋಡಿ ಎನ್ನುವ ಸಾಧನೆ ಮಾಡಿದ್ದಾರೆ.

ಫಿಟ್‌ನೆಸ್ ಕೊರತೆಯ ಕಾರಣದಿಂದಾಗಿ ಈ ಜೋಡಿ ಸಿಂಗಪುರ ಓಪನ್ ಟೂರ್ನಿಯಲ್ಲಿ ಆರಂಭಿಕ ಸುತ್ತಿನಲ್ಲಿಯೇ ಸೋಲು ಕಂಡಿತ್ತು. ಆದರೆ 2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ, ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ – ಹೀಗೆ ಅನೇಕ ಪದಕಗಳ ಗೊಂಚಲು ಅವರ ಬಳಿ ಇವೆ. ಇವರ ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭರವಸೆ ಮೂಡಿಸಿರುವ ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್ ಭಾರತದ ಸವಾಲು ಮುನ್ನಡೆಸಲಿದ್ದಾರೆ. ವಿಶೇಷವೆಂದರೆ, ಭಾರತ ಹಿಂದಿನ ಮೂರೂ ಒಲಿಂಪಿಕ್ಸ್‌ಗಳಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪದಕಗಳನ್ನು ಗೆದ್ದುಕೊಂಡಿದ್ದು ಈ ಗೆಲುವಿನ ಹಾದಿ ಪ್ಯಾರಿಸ್‌ನಲ್ಲಿಯೂ ಮುಂದುವರಿಯುವ ನಿರೀಕ್ಷೆಗಳಿವೆ.

## ನಿಖರ ಪಂಚ್‌ಗಳ ನಿಖತ್ ಝರೀನ್

ಯೂತ್ ಹಂತದ ಸ್ಪರ್ಧೆಗಳಿಂದ ನಿಖರ 'ಪಂಚ್'ಗಳ ಮೂಲಕ ಗಮನ ಸೆಳೆಯುತ್ತಿರುವ ಆಂಧ್ರದ ನಿಜಾಮಾಬಾದ್‌ನ ನಿಖತ್ ಝರೀನ್ ಭರವಸೆಯ ಬಾಕ್ಸರ್.

ಹಿಂದಿನ ಸತತ ಎರಡು ವರ್ಷವೂ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳ ಮಿಂಚು ಹರಿಸಿರುವ ನಿಖತ್, 2011ರಲ್ಲಿ ಯೂತ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಎರಡು ವರ್ಷಗಳ ಹಿಂದೆ ಏಷ್ಯನ್ ಗೇಮ್ಸ್‌ನಲ್ಲಿ ಕಂಚು, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಜಯಿಸಿದ್ದಾರೆ.

ಆರು ಜನ ಸಹೋದರಿಯರ ನಡುವೆ ತಂದೆಯ ಕ್ರೀಡಾ ಪ್ರೀತಿಯಂತೆ ಅದೇ ಕ್ಷೇತ್ರದಲ್ಲಿ ಸಾಧನೆಯ ಮೆಟ್ಟಿಲುಗಳನ್ನು ಏರುತ್ತಿರುವ ನಿಖತ್ ಶ್ರಮಜೀವಿ.

## ಒಲಿಂಪಿಕ್ಸ್ ಆತಿಥ್ಯ; ಭಾರತ ಬಲು ದೂರ

ವಿಶ್ವದ ಶ್ರೇಷ್ಠ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲು ಅನೇಕ ರಾಷ್ಟ್ರಗಳು ನಾ ಮುಂದು, ತಾ ಮುಂದು ಎಂದು ಜಿದ್ದಿಗೆ ಬಿದ್ದಿದ್ದರೆ ಜಾಗತಿಕವಾಗಿ ಬಲಿಷ್ಠ ದೇಶಗಳಲ್ಲಿ ಒಂದೆಂದು ಹೇಳಿಕೊಳ್ಳುತ್ತಿರುವ ಭಾರತ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸುವ ವಿಷಯದಲ್ಲಿ ಬಲು ದೂರವಿದೆ.

ಕಾಮನ್‌ವೆಲ್ತ್, ಏಷ್ಯನ್ ಕ್ರೀಡಾಕೂಟಗಳನ್ನು ಆಯೋಜಿಸಿದ ಅನುಭವ ಹೊಂದಿರುವ ಭಾರತ ಒಲಿಂಪಿಕ್ಸ್ ಎನ್ನುವ ಬೆಳ್ಳಿಚುಕ್ಕಿಗೆ ಆತಿಥ್ಯ ವಹಿಸಲು ಮುಂದಡಿ ಇರಿಸಿಲ್ಲ. ಅಷ್ಟೊಂದು ಕ್ರೀಡಾ ಸೌಲಭ್ಯಗಳನ್ನು ಹೊಂದಿಸಿ 'ಏಕತೆ' ಮೆರೆಯುವ ಕೆಲಸವಾಗಿಲ್ಲ. ಇಷ್ಟೊಂದು ದೊಡ್ಡ ಕ್ರೀಡಾಕೂಟಗಳನ್ನು ಸಮರ್ಥವಾಗಿ ಸಂಘಟಿಸುವಲ್ಲಿ ಯುರೋಪ್ ರಾಷ್ಟ್ರಗಳು ಮುಂಚೂಣಿಯಲ್ಲಿವೆ. ಫ್ರಾನ್ಸ್ ಈ ಬಾರಿಯ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸುವ ಮೂಲಕ ಹೆಚ್ಚು ಬಾರಿ ಒಲಿಂಪಿಕ್ಸ್ ಸಂಘಟಿಸಿದ ಸಾಲಿನಲ್ಲಿ ಯುನೈಟೆಡ್ ಕಿಂಗ್‌ಡಮ್ ಸಾಲಿಗೆ ಸೇರ್ಪಡೆಯಾಯಿತು. ಈ ಎರಡೂ ದೇಶಗಳು ತಲಾ ಮೂರು ಬಾರಿ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಿವೆ.

ಲಂಡನ್ ನಗರದಲ್ಲಿ 1908, 1948, 2012 ಒಲಿಂಪಿಕ್ಸ್ ಕ್ರೀಡಾಕೂಟಗಳು ನಡೆದರೆ, ಪ್ಯಾರಿಸ್‌ನಲ್ಲಿ 1900, 1924ರಲ್ಲಿ ನಡೆದಿದ್ದವು. ಈ ಬಾರಿಯೂ ಆತಿಥ್ಯ ವಹಿಸಿದೆ. ಮುಂದಿನ 2028ರ ಒಲಿಂಪಿಕ್ಸ್ ವೇಳೆಗೆ ಅಮೆರಿಕ ಕೂಡ ಈ ಕೀರ್ತಿಗೆ ಭಾಜನವಾಗಲಿದೆ. ಮುಂದಿನ ಕ್ರೀಡಾಕೂಟ ಲಾಸ್ ಏಂಜಲೀಸ್‌ನಲ್ಲಿ ಆಯೋಜನೆಯಾಗಿದ್ದು, ಇದೇ ನಗರದಲ್ಲಿ 1932, 1984ರಲ್ಲಿ ಸ್ಪರ್ಧೆಗಳು ನಡೆದಿದ್ದವು.

ಇವುಗಳನ್ನು ಹೊರತುಪಡಿಸಿ ಅಥೆನ್ಸ್ ಹಾಗೂ ಟೋಕಿಯೊ ಕೂಡ ತಲಾ ಎರಡು ಬಾರಿ ಒಲಿಂಪಿಕ್ಸ್ ಸಂಘಟಿಸಿವೆ. ಈ ಸಲದ ಒಲಿಂಪಿಕ್ಸ್ ಸ್ಥಳದ ನಿರ್ಧಾರ 2017ರಲ್ಲಿಯೇ ಆಗಿದೆ. ಈಗಾಗಲೇ ಮುಂದಿನ ಎರಡು ಕ್ರೀಡಾಕೂಟ ಎಲ್ಲಿ ನಡೆಯುತ್ತದೆ ಎನ್ನುವ ನಿರ್ಧಾರವೂ ಆಗಿದ್ದು, ಭಾರತ ಮಾತ್ರ ಒಲಿಂಪಿಕ್ಸ್ ಆತಿಥ್ಯದ ಹಾದಿಯಲ್ಲಿ ಸಾಗಲು ಬಹುದೂರ ಕ್ರಮಿಸಬೇಕಿದೆ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ, ಕ್ರೀಡಾಶಕ್ತಿಯನ್ನು ಜಗತ್ತಿನ ಮುಂದೆ ತೆರೆದಿಡುವ ಸಂಕಲ್ಪವೂ ಆಗತ್ಯವಿದೆ.